ಪ್ರಜಾವಾಣಿ

# ಅರ್ಚನಾಗೆ ಚಿನ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಅರ್ಚನಾ ಕಾಮತ್ ಗ್ರೇಟರ್ ನೊಯ್ಡಾದಲ್ಲಿ ನಡೆದ ರಾಷ್ಟ್ರೀಯ ರ್‍ಯಾಂಕಿಂಗ್ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಗೆದ್ದು-ಕೊಂಡಿದ್ದಾರೆ.

18 ವರ್ಷದೊಳಗಿನವರ ಜೂನಿಯರ್ ಬಾಲಕಿಯರ ವಿಭಾಗದಲ್ಲಿ ಅರ್ಚನಾ ಚಾಂಪಿಯನ್ ಆದರು.

ಫೈನಲ್ ಪಂದ್ಯದಲ್ಲಿ ರಾಜ್ಯದ ಆಟಗಾರ್ತಿ 11-8, 8-11, 8-11, 11-8, 12-10, 11-4ರಲ್ಲಿ ಮಹಾರಾಷ್ಟ್ರದ ಸೃಷ್ಟಿ ವಿರುದ್ಧ ಗೆದ್ದರು.

ಈ ಋತುವಿನಲ್ಲಿ ಅರ್ಚನಾ ಗೆದ್ದ ಎರಡನೇ ರಾಷ್ಟ್ರೀಯ ಪ್ರಶಸ್ತಿ ಇದಾಗಿದೆ. ಸೆಮಿಫೈನಲ್‌ನಲ್ಲಿ ಅವರು 11-9, 11-4, 3-11, 11-8, 11-8ರಲ್ಲಿ ಬಂಗಾಳದ ಪ್ರಾಪ್ತಿ ಸೇನ್ ವಿರುದ್ಧ ಜಯದಾಖಲಿಸಿ ಫೈನಲ್ ತಲುಪಿದ್ದರು.